ಅಸಲು ದಾವಾ ನಂಃ 19/2023
ಡಿ ಡಬ್ಲ್ಯುಃ1

<u>ದಿನಾಂಕಃ **19-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಎಂ ವಿ ವಕೀಲರಿಂದಃ</u>

ದಾವಾ ಸ್ವತ್ತು 1 ರಿಂದ 5 ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ದಾವಾ ಸ್ವತ್ತು 6 ನನಗೆ ಸರ್ಕಾರದಿಂದ ಮಂಜೂರು ಆದ ಆಸ್ತಿ ಇರುತ್ತದೆ. ದಾವಾ ಸ್ವತ್ತು 6 ನ್ನು ಮಂಜೂರು ಮಾಡುವಂತೆ ನಾನು ಯಾವಾಗ ಅರ್ಜಿ ಕೊಟ್ಟಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಾನು, ನನ್ನ ಮಗಳು ಮತ್ತು ನನ್ನ ಮಗ ಹಿಸ್ಸೆ ಮಾಡಿಕೊಂಡ ನಂತರ ದಾವಾ ಸ್ವತ್ತು 6 ಕ್ಕೆ ಸಂಬಂಧಪಟ್ಟಂತೆ ಆನಂತರ ಗ್ರ್ಯಾಂಟ್ ಸರ್ಟಿಫಿಕೇಟ್ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಹಿಸ್ಸೆ ಪತ್ರದ ಪ್ರಕಾರ ನನಗೆ 1 ಎಕರೆ 7 ಗುಂಟೆ ಜಮೀನು ಬಂದಿರುತ್ತದೆ. ಹಿಸ್ಸೆ ಪತ್ರ ಮಾಡಿಕೊಳ್ಳುವ ಕಾಲಕ್ಕೆ ಪಿತ್ರಾರ್ಜಿತ ಆಸ್ತಿಗಳನ್ನು ಎಲ್ಲಾ ಸೇರಿಸಿರುತ್ತೇವೆ. ಹಿಸ್ಸೆ ಪತ್ರದ ಪ್ರಕಾರ ನಾನು ಕುಟುಂಬದಲ್ಲಿ ಉಳಿಸಿ ಗಳಿಸಿದ ರೂ.50,000/- ಹಣವನ್ನು ನಾನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹಿಸ್ಸೆ ಪತ್ರ ಆಗುವ ಕಾಲಕ್ಕೆ ನಾನು ಹಣವನ್ನು ಬ್ಯಾಂಕಿನಲ್ಲಿ ಇಟ್ಟಿರುವುದಿಲ್ಲ ಆದರೆ ನಾನೇ ಸ್ವತಃ ಗಳಿಸಿದ ಹಣವನ್ನು ನನ್ನ ಬಳಿ ಇಟ್ಟುಕೊಂಡಿರುತ್ತೇನೆ.

2. ಹಿಸ್ಸೆ ಪತ್ರ ಆಗುವ ಕಾಲಕ್ಕೆ ನನ್ನ ಕುಟುಂಬದಲ್ಲಿ ಗಳಿಸಿ ಇಟ್ಟ ಹಣ ಯಾವುದು ಇರಲಿಲ್ಲ. ಹಿಸ್ಸಾ ಪತ್ರವನ್ನು ನೀವೇ ಬರೆಸಿರುತ್ತೀರೀ ಎಂದರೆ ಸಾಕ್ಷಿ ನನ್ನ ಮಗಳೇ ಬರೆಸಿರುತ್ತಾಳೆ ಎಂದು ಉತ್ತರಿಸುತ್ತಾರೆ. ನಾನು ಹಿಸ್ಸಾ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಾನು ಗಳಿಸಿ ಉಳಿಸಿಕೊಂಡ ಹಣಕ್ಕೆ ಲೆಕ್ಕ ಪತ್ರ ಇರುವುದಿಲ್ಲ. ನಾನು ಹಣ ಕೊಟ್ಟ ಬಗ್ಗೆ ಮತ್ತು ತೆಗೆದುಕೊಂಡ ಬಗ್ಗೆ ಯಾವುದೇ ಲೆಕ್ಕ ಪತ್ರ ಅಥವಾ ಡೈರಿ ಇರುವುದಿಲ್ಲ. ನಾನು ಮೊದಲು ಮರಳಿನ ಕ್ವಾರೆ ವ್ಯವಹಾರ ಮಾಡುತ್ತಿದ್ದು ಆ ಬಗ್ಗೆ ಲೈಸೆನ್ಸ್ ಇತ್ತು ಆದರೆ ಈಗ ಇರುವುದಿಲ್ಲ. ನಾನು ಸದರಿ ಮರಳಿನ ಕ್ವಾರೆಯನ್ನು ಯಾವ ವರ್ಷದಿಂದ ಯಾವ ವರ್ಷದವರೆಗೆ ಮಾಡುತ್ತಿದ್ದೆ ಎಂದು ನನಗೆ ನೆನಪಿರುವುದಿಲ್ಲ. 1996 ರ ನಂತರ ಮರಳಿನ ಕ್ವಾರೆಯ ಲೈಸೆನ್ಸ್ ಅನ್ನು ನೀಡುತ್ತಿಲ್ಲ ಎಂದರೆ ಸರಿ. ನಾನು ಮರಳಿನ ಕ್ವಾರೆಯನ್ನು ನಡೆಸುತ್ತಿದ್ದ ಬಗ್ಗೆ ಲೈಸೆನ್ಸ್ ಇರುವುದಿಲ್ಲ.

3. ನಾನು ಮಗಳಿಗೆ ರೂ.1 ಲಕ್ಷ ಹಣವನ್ನು ನಗದಾಗಿ ಭಾಗ ಮಾಡಿಕೊಡುವ ಕಾಲಕ್ಕೆ ಕೊಟ್ಟಿರುತ್ತೇನೆ ಸಾಕ್ಷಿ ಮುಂದುವರೆದು ನಾನು ರೂ.7 ಲಕ್ಷ ಕೊಟ್ಟಿರುತ್ತೇನೆ ಆದರೆ ರೂ.1 ಲಕ್ಷ ಮಾತ್ರ ಪತ್ರದಲ್ಲಿ ತೋರಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ನನ್ನ ಬಳಿ ಆ ಕಾಲಕ್ಕೆ ರೂ.1 ಲಕ್ಷ ಹಣ ನಗದಾಗಿ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಇರಲಿಲ್ಲ. ಹಿಸ್ಸಾ ಪತ್ರ ಮಾಡಿಕೊಳ್ಳುವ ಕಾಲಕ್ಕೆ ವಾದಿಗೆ ಮದುವೆ ಆಗಿರಲಿಲ್ಲ ಎಂದರೆ ಸರಿ. ವಾದಿಯು ವಿಭಾಗ ಮಾಡಿಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ಅವರೇ ವಿಭಾಗ ಮಾಡಿಕೊಳ್ಳೋಣ ಎಂದು ಹಾಗೂ ನಗದಾಗಿ ಹಣ ಕೊಡುವಂತೆ ಹೇಳಿದ್ದರು ಎಂದು ಉತ್ತರಿಸುತ್ತಾರೆ. ವಾದಿ ನನ್ನ ಕಡೆಯಿಂದ ನಗದಾಗಿ ರೂ.1 ಲಕ್ಷ ಹಣ ಪಡೆದುಕೊಂಡಿರುತ್ತಾರೆ ಎಂಬ ಬಗ್ಗೆ ಯಾವುದೇ ರಸೀದಿ ಇರುವುದಿಲ್ಲ. ವಿಭಾಗ ಪತ್ರದಲ್ಲಿ ರೂ.1 ಲಕ್ಷ ಹಣ ಕೊಟ್ಟಿರುವ ಬಗ್ಗೆ ವಿಭಾಗ ಪತ್ರವೇ ರಸೀದಿ ಎಂದು ನಮೂದು ಇರುವುದಿಲ್ಲ.

4. ನಾನು ನಗದಾಗಿ ರೂ.1 ಲಕ್ಷ ಹಣವನ್ನು ವಾದಿಗೆ ನೋಂದಣಿ ಕಛೇರಿಯಲ್ಲಿ ಕೊಟ್ಟಿರುತ್ತೇನೆ. ನಾನು ಸದರಿ ಹಣವನ್ನು ನೋಂದಣಿ ಅಧಿಕಾರಿ ಮುಂದೆ ಕೊಟ್ಟಿರುವುದಿಲ್ಲ. ನಾನು ರೂ.1 ಲಕ್ಷ ಹಣವನ್ನು ವಾದಿಗೆ ಕೊಟ್ಟಿರುವ ಬಗ್ಗೆ ನೋಂದಣಿ ಅಧಿಕಾರಿಗೆ ಹೇಳಿರುತ್ತೇನೆ. ವಿಭಾಗ ಪತ್ರದಲ್ಲಿ ರೂ.1 ಲಕ್ಷ ಹಣವನ್ನು ನೋಂದಣಿ ಅಧಿಕಾರಿ ಕಛೇರಿ ಮುಂದೆ ಕೊಟ್ಟ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ವಾದಿಗೆ ರೂ.1 ಲಕ್ಷ ಹಣವನ್ನು ನೋಂದಣಿ ಅಧಿಕಾರಿ ಕಛೇರಿಯಲ್ಲಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರದಲ್ಲಿ ವಾದಿಗೆ ರೂ. 7 ಲಕ್ಷ ಹಣ ಕೊಟ್ಟಿರುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ವಿಭಾಗ ಮಾಡಿಕೊಳ್ಳುವ ಕಾಲಕ್ಕೆ ನಮ್ಮ ನಡುವೆ ಯಾವುದೇ ವ್ಯಾಜ್ಯ ಇರಲಿಲ್ಲ ಎಂದರೆ ಸಾಕ್ಷಿ ನಮ್ಮ ಮಗಳೇ ಮಾಡಬೇಕು ನನಗೆ ವ್ಯವಹಾರ ಮಾಡಲು ಬೇಕು ಎಂದು ಉತ್ತರಿಸುತ್ತಾರೆ. ವಾದಿ ನನ್ನಿಂದ ಹಣ ಪಡೆದುಕೊಂಡು ವ್ಯವಹಾರ ಮಾಡುತ್ತಿದ್ದರು ಎಂಬ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ.

5. ಸರ್ಕಾರದವರು 4 ಎಕರೆ 38 ಗುಂಟೆಗಿಂತ ಜಾಸ್ತಿ ಜಮೀನು ಇದ್ದರೆ ಅಕ್ರಮ ಸಕ್ರಮದ ಅಡಿ ಜಮೀನು ಮಂಜೂರು ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನನಗೆ ವಿಭಾಗ ಪತ್ರದಲ್ಲಿ ಬಂದ ಆಸ್ತಿಯನ್ನು ಕಳೆದು ದಾವಾ ಸ್ವತ್ತು

6 ನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು 6 ನ್ನು ಮಂಜೂರು ಮಾಡುವ ಪೂರ್ವದಲ್ಲಿ ತಹಶೀಲ್ದಾರರು ಅವರ ಮುಂದೆ ವಿಭಾಗ ಪತ್ರವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 6 ನ್ನು ಮಂಜೂರು ಮಾಡುವ ಪೂರ್ವದಲ್ಲಿ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ಅಧಿಕಾರಿಗಳು ವಿಭಾಗ ಪತ್ರದ ಮುಖಾಂತರ ಬಂದ ಆಸ್ತಿಯ ಬಗ್ಗೆ ನಮೂದು ಮಾಡಿ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಮಗಳಿಗೆ ಅಕ್ರಮ ಸಕ್ರಮದ ಅಡಿ ಭೂಮಿ ಮಂಜೂರು ಆಗ ಬೇಕಾದರೆ ವಿಭಾಗ ಆಗಬೇಕು ಎಂದು ನನ್ನ ಮಗಳ ಕಡೆಯಿಂದ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

6. ಒಟ್ಟು ಕುಟುಂಬದ ಎಲ್ಲಾ ಸ್ವತ್ತುಗಳನ್ನು ವಿಭಾಗ ಆಗದ ಹೊರತು ದಾವಾ ಸ್ವತ್ತು 6 ನನಗೆ ಮಂಜೂರು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರ ಆಗುವ ಕಾಲಕ್ಕೆ ನಿಮ್ಮ ಮಗಳು ಓದುತ್ತಿದ್ದಳ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ವಿಭಾಗ ಪತ್ರ ಆಗುವ ಕಾಲಕ್ಕೆ ನನ್ನ ಮಗಳು ನಾನು ಹೇಳಿದ ರೀತಿ ಕೇಳುತ್ತಾ ಇದ್ದರು ಎಂದರೆ ಸರಿಯಲ್ಲ. ನಮ್ಮ ಮಗಳನ್ನು ನಾವು ಮನೆಯಿಂದ ಹೊರಗಡೆ ಬಿಟ್ಟು ಓದಿಸಿರುತ್ತೇವೆ ಎಂದರೆ ಸಾಕ್ಷಿ ಚೆನ್ನಾಗಿ ಓದಲಿ ಎಂದು ಬಿಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ.

7. ನಾವು ವಿಭಾಗ ಪತ್ರವನ್ನು ವಾದಿಯ ಕಡೆಯಿಂದ ಮೋಸದಿಂದ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಗನ ಹಿಸ್ಸೆಗ ಬಂದ ಆಸ್ತಿಯನ್ನು ನನ್ನ ಹೆಂಡತಿಯ ಹೆಸರಿಗೆ ನಾನೇ ದಾನ ಪತ್ರವನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಅಕ್ರಮ ಸಕ್ರಮ ಯೋಜನೆ ಅಡಿ ಜಮೀನು ಮಂಜೂರು ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಮ್ಮ ಮಗ ನಿಮ್ಮ ಜೊತೆ ವಾಸ ಇಲ್ಲ ಎಂದರೆ ಸಾಕ್ಷಿ ಅವರು ಬೆಂಗಳೂರಿನಲ್ಲಿ ಇದ್ದಾನೆ ಆದರೆ ನಮ್ಮ ಮತ್ತು ಅವನ ವ್ಯವಹಾರ ಬೇರೆ ಬೇರೆ ಇರುತ್ತದೆ ಎಂದು ಉತ್ತರಿಸುತ್ತಾರೆ. ನನ್ನ ಮಗಳ ಮದುವೆಯನ್ನು ಮಂದಾರ್ತಿ ದುರ್ಗಾಪರಮೇಶ್ವರಿ ದೇವಸ್ಥಾದಲ್ಲಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಮದುವೆಗೆ ಸುಮಾರು 25 ಜನರಷ್ಟು ಬಂದಿದ್ದರು ಎಂದರೆ ಸಾಕ್ಷಿ ಸಾಕಷ್ಟು ಜನ ಬಂದಿದ್ದರು ಎಂದು ಉತ್ತರಿಸುತ್ತಾರೆ. ನನ್ನ ಮಗಳ ಮದುವೆಗೆ ಹುಡುಗನನ್ನು ನಾವು ಎಲ್ಲರು ಸೇರಿ ನೋಡಿ ಮಾಡಿರುತ್ತೇವೆ.

8. ನನ್ನ ಮಗಳ ಮದುವೆಯ ಮಾತು ಕತೆ ನಮ್ಮ ಮನೆಯಲ್ಲಿ ಆಗಿರುತ್ತದೆ. ನನ್ನ ಮಗಳ ಮದುವೆ ನಿಶ್ಚಿತಾರ್ಥಕ್ಕೆ ಸುಮಾರು 50 ಜನ ಸೇರಿದ್ದರು. ನನ್ನ ಮಗಳ ಮದುವೆ ಮಾತು ಕತೆ ಕಾಲಕ್ಕೆ ನಾನು 30 ಪವನ್ ಬಂಗಾರವನ್ನು ಕೊಡುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಮಗಳ ಮದುವೆ ಕಾಲಕ್ಕೆ ಮದುವೆ ಖರ್ಚನ್ನು ನೀವೆ ನೋಡಿಕೊಳ್ಳಬೇಕು ಆಸ್ತಿಯಲ್ಲಿ ಹಕ್ಕು ಕೊಡುತ್ತೇವೆ ಎಂದು ನಾನು ಹೇಳಿದ್ದೆ ಎಂದರೆ ಸರಿಯಲ್ಲ. ನನ್ನ ಮಗಳ ಮದುವೆಗೆ ಖರ್ಚು ಮಾಡಿದ ಸಂಬಂಧ ದಾಖಲೆ ಇರುವುದಿಲ್ಲ ಸಾಕ್ಷಿ ಮುಂದಮರೆದು ಬೇಕೆಂದರೆ ಅದನ್ನು ತಂದು ಕೊಡುತ್ತೇನೆ ಎಂದು ಉತ್ತರಿಸುತ್ತಾರೆ. ಮಂದಾರ್ತಿ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಮದುವೆಯಾದರೆ ಖರ್ಚು ವೆಚ್ಚಗಳ ಬ್ಗಗೆ ರಸೀದಿ ಹಾಕುತ್ತಾರೆ ಎಂದರೆ ಸರಿ. ನನ್ನ ಮಗಳ ಮದುವೆಯ ಖರ್ಚನ್ನು ಅವಳ ಗಂಡ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗಳ ಮದುವೆಯಾದ ನಂತರ ನನ್ನ ಮಗಳು ಮತ್ತು ಅಳಿಯನ್ನು ನಾವು ಮನೆ ಒಳಗೆ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮಗಳಿಗೆ ತಂದೆ ತಾಯಿ ಪ್ರೀತಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ವಿದ್ಯಾಭ್ಯಾಸಕ್ಕೆ ಮಲ್ಲಪ್ಪ ಹೆಗಡೆ ಎಂಬುವರು ಹಣಕಾಸಿನ ಸಹಾಯ ಮಾಡಿರುತ್ತಾರೆ ನಾನು ಸಹಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

9. ಮಲ್ಲಪ್ಪ ಹೆಗಡೆ ಇವರ ಮನೆಯಲ್ಲಿ ನನ್ನ ಮಗಳು ಮತ್ತು ನಾವು ಪಂಚಾಯಿತಿಗೆ ಸೇರಿರುತ್ತೇವೆ ಎಂದರೆ ಸರಿ. ನಾನು ಸದರಿ ಪಂಚಾಯಿತಿಯಲ್ಲಿ ಮದುವೆಯ ಕಾಲಕ್ಕೆ ಕೊಡುತ್ತೇನೆ ಎಂದ ಆಸ್ತಿಯ ಬಗ್ಗೆ ಮಾತು ಕತೆ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ನನ್ನ ಮಗಳಿಗೆ ಆಸ್ತಿಯನ್ನು ಕೊಡುವುದಿಲ್ಲ ಎಂದು ಬೈದಿರುತ್ತೇನೆ ಎಂದರೆ ಸರಿಯಲ್ಲ. ಆ ಬಗ್ಗೆ ನನ್ನ ವಿರುದ್ಧ ಶೃಂಗೇರಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ ಎಂದರೆ ಸರಿ ಸಾಕ್ಷಿ ಮುಂದುವರೆದು ಆ ಬಗ್ಗೆ ನಾನು ಹೇಳಿಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ.

10. ದಾವಾ ಸ್ವತ್ತು 7 ರಲ್ಲಿ ಹಳೆ ಮನೆ ಇರುತ್ತದೆ ನಾನು ಹೊಸ ಮನೆಯನ್ನು ಕಟ್ಟಿಸಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಹಳೇ ಮನೆ ಬಿದ್ದು ಹೋಗಿ ನಾನು ಬೇರೆ ಕಡೆ ಮನೆ ಕಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ಸದರಿ ಮನೆಯನ್ನು ಕಟ್ಟಲು ಯಾವಾಗ ಪಾಯ ತೆಗೆದಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಾನು ಬ್ಯಾಂಕಿನಲ್ಲಿ

ಯಾವಾಗ ಸಾಲ ಪಡೆದಿರುತ್ತೇನೆ ಎಂದು ನೆನಪಿರುವುದಿಲ್ಲ. ನಾನು ಹಾಜರುಪಡಿಸಿರುವ ನಿಡಿ-12 ರ ಪ್ರಕಾರ ನಾನು 2015 ರಲ್ಲಿ ಮಂಜೂರಾತಿಗಾಗಿ ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಮನೆ ಕಟ್ಟಲು ಯಾವುದೇ ಆಸ್ತಿಯನ್ನು ಭದ್ರತೆ ಸಲುವಾಗಿ ಕೊಟ್ಟಿರುವುದಿಲ್ಲ. ನಾನು ಮನೆಯ ಮೇಲೆ ಡಿ ಸಿ ಸಿ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ